# ಕರ್ನಾಟಕ ವಿಧಾನ ಪರಿಷತ್ತು

## ಲಘು ಪ್ರಕಟಣೆ ಭಾಗ – 2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಶುಕ್ರವಾರ, 16.04.2021

*****

**ಸಂಖ್ಯೆ:42**

ವಿಧಾನ ಪರಿಷತ್ತಿನ 143ನೇ ಅಧಿವೇಶನದ ಮುಂದುವರೆದ ಉಪಪವೇಶನದಲ್ಲಿ ದಿನಾಂಕ:18.3.2021ರಂದು ನಿಯಮ 72ರ ಅಡಿಯಲ್ಲಿ ಮಾನ್ಯ ಸದಸ್ಯರಾದ ಶ್ರೀ ಎನ್. ರವಿಕುಮಾರ್ ಅವರು ರಾಜ್ಯದಲ್ಲಿ 2020–21ನೇ ಸಾಲಿನಲ್ಲಿ ಹೊಸದಾಗಿ ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸ್ ಕಾಲೇಜುಗಳಿಗೆ ಮೂಲ ಸೌಕರ್ಯಗಳಿಲ್ಲದಿದ್ದರೂ ಅನುಮತಿ ನೀಡಿ ಇಂಡಿಯನ್ ನರ್ಸಿಂಗ್ ಕೌನ್ಸಿಲ್ ಅವರು ಹೊರಡಿಸಿರುವ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವ ಕುರಿತು ಪ್ರಸ್ತಾಪಿಸಿದ್ದು ಈ ವಿಷಯವನ್ನು ಪರಿಶೀಲಿಸಿ ವರದಿ ಸಲ್ಲಿಸಲು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 242(ಎ)(1)ರ ರೀತ್ಯಾ, ವಿಶೇಷ ಜಂಟಿ ಸದನ ಸಮಿತಿಯನ್ನು **ಶ್ರೀ ಎನ್. ರವಿಕುಮಾರ್** ಅವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸದಸ್ಯರುಗಳನ್ನೊಳಗೊಂಡಂತೆ ರಚಿಸಲಾಗಿರುತ್ತದೆ. ಸಮಿತಿಯು ವರದಿಯನ್ನು ಸಲ್ಲಿಸಲು 3 ತಿಂಗಳ ಕಾಲಾವಕಾಶವನ್ನು ನೀಡಲಾಗಿರುತ್ತದೆ.

ಶ್ರೀಯುತರುಗಳಾದ:

| | | | |
|---|---|---|---|
| 01. | ಎನ್. ರವಿಕುಮಾರ್ | : | ಅಧ್ಯಕ್ಷರು |
| 02. | ಎಸ್.ವ್ಹಿ. ಸಂಕನೂರ | : | ಸದಸ್ಯರು |
| 03. | ಕೆ.ಟಿ. ಶ್ರೀಕಂಠೇಗೌಡ | : | ಸದಸ್ಯರು |
| 04. | ಆರ್. ಧರ್ಮಸೇನ | : | ಸದಸ್ಯರು |
| 05. | ಯು.ಬಿ. ವೆಂಕಟೇಶ್ | : | ಸದಸ್ಯರು |

| | | | |
|---|---|---|---|
| 06. | ಎ.ಎಸ್. ಪಾಟೀಲ್ (ನಡಹಳ್ಳಿ) | : | ಸದಸ್ಯರು |
| 07. | ಡಾ: ಅವಿನಾಶ್ ಉಮೇಶ್ ಜಾಧವ್ | : | ಸದಸ್ಯರು |
| 08. | ಡಾ: ಶಿವರಾಜ್ ಪಾಟೀಲ್ | : | ಸದಸ್ಯರು |
| 09. | ಅರವಿಂದ ಬೆಲ್ಲದ್ | : | ಸದಸ್ಯರು |
| 10. | ಡಾ: ಸಿ.ಎಂ. ರಾಜೇಶ್ ಗೌಡ | : | ಸದಸ್ಯರು |
| 11. | ಡಾ: ಭರತ್‌ಶೆಟ್ಟಿ ವೈ | : | ಸದಸ್ಯರು |
| 12. | ಡಾ: ಅಂಜಲಿ ಹೇಮಂತ್ ನಿಂಬಾಳ್ಕರ್ | : | ಸದಸ್ಯರು |
| 13. | ಡಾ: ಹೆಚ್.ಡಿ. ರಂಗನಾಥ್ | : | ಸದಸ್ಯರು |
| 14. | ಡಾ: ಯತೀಂದ್ರ ಸಿದ್ದರಾಮಯ್ಯ | : | ಸದಸ್ಯರು |
| 15. | ಡಾ: ಕೆ. ಶ್ರೀನಿವಾಸಮೂರ್ತಿ | : | ಸದಸ್ಯರು |

## ಸಮಿತಿಯ ಪರಿಶೀಲನಾಂಶಗಳು

1. 2020-21ರ ಸಾಲಿನಲ್ಲಿ ಯಾವ ಯಾವ ನರ್ಸಿಂಗ್ ಹಾಗೂ ಅಲೈಡ್ ಹೆಲ್ತ್ ಸೈನ್ಸ್ಸ್ ಕಾಲೇಜುಗಳಿಗೆ ನೀಡಿರುವ ಅನುಮತಿಯಲ್ಲಿನ ಆಡಳಿತಾತ್ಮಕ ಲೋಪದೋಷಗಳು ಹಾಗೂ ರಾಜ್ಯದಲ್ಲಿ ಈವರೆವಿಗೂ ಪ್ರಾರಂಭಿಸಲಾಗಿರುವ ಪ್ರತಿಯೊಂದು ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸ್ಸ್ ಕಾಲೇಜುಗಳ ಜಿಲ್ಲಾವಾರು ಸ್ಥಿತಿಗತಿಗಳ ಬಗ್ಗೆ ಹಾಗೂ ನಡೆದಿರುವ ಅವ್ಯವಹಾರಗಳ ಕುರಿತು ಸಮಗ್ರವಾಗಿ ಪರಿಶೀಲಿಸುವುದು ಮತ್ತು ಸರಿಪಡಿಸಲು ಸೂಕ್ತ ನಿರ್ದೇಶನಗಳನ್ನು ಸೂಚಿಸುವುದು.

2. ರಾಜ್ಯದಲ್ಲಿರುವ ಎಲ್ಲಾ ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸ್ಸ್ ಕಾಲೇಜುಗಳ ಗುಣಮಟ್ಟ, ಮೂಲಭೂತ ಸೌಕರ್ಯ, ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳು, ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಹಾಗೂ ಅವರುಗಳ ಹಾಜರಾತಿ ಬಗ್ಗೆ ಅನುಸರಿಸುತ್ತಿರುವ ಮಾನದಂಡಗಳ ಕುರಿತು ಪರಿಶೀಲಿಸುವುದು.

-3

3. ಸದರಿ ಕಾಲೇಜುಗಳನ್ನು ಅಫಿಲಿಯೇಟ್(affiliate) ಮಾಡಲು ಅನುಸರಿಸುವ ಕ್ರಮಗಳಾವುವು; ಕಾಲೇಜುಗಳಲ್ಲಿ ಸೀಟುಗಳ ಹಂಚಿಕೆಗೆ ಸಂಬಂಧಿಸಿದಂತೆ ರೂಪಿಸಲಾಗಿರುವ ನಿಯಮಗಳನ್ನು ಪರಿಶೀಲಿಸುವುದು;

4. ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸ್ ಕಾಲೇಜುಗಳಲ್ಲಿ ರಾಜ್ಯ ಹಾಗೂ ಹೊರ ರಾಜ್ಯಗಳ ವಿದ್ಯಾರ್ಥಿಗಳ ಪ್ರವೇಶಾತಿಗೆ ನಿಗದಿಪಡಿಸಿರುವ ಶುಲ್ಕ ಮತ್ತು ಇತರೆ ಮಾನದಂಡಗಳನ್ನು ಪರಿಶೀಲಿಸುವುದು; ರಾಜ್ಯದಲ್ಲಿ ಯಾವ ಯಾವ ಕಾಲೇಜುಗಳಲ್ಲಿ ಹೊರ ರಾಜ್ಯಗಳ ಎಷ್ಟು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ: ಅವರ ಹಾಜರಾತಿ ಬಗ್ಗೆ ಪರಿಶೀಲಿಸುವುದು:

5. ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಮತ್ತು ಇಂಡಿಯನ್ ನರ್ಸಿಂಗ್ ಕೌನ್ಸಿಲ್‌ರವರು ರಾಜ್ಯದಲ್ಲಿ ಹೊಸದಾಗಿ ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸ್ ಕಾಲೇಜುಗಳನ್ನು ಪ್ರಾರಂಭಿಸಲು ಗೊತ್ತುಪಡಿಸಿರುವ ಮಾರ್ಗಸೂಚಿಗಳೇನು; ರಾಜ್ಯದಲ್ಲಿ ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸ್ ಕಾಲೇಜುಗಳನ್ನು ತೆರೆಯಲು ಈ ಮಾರ್ಗಸೂಚಿಗಳನ್ನು ಅನುಸರಿಸಲಾಗಿದೆಯೆ ಎಂಬುದರ ಕುರಿತು ಪರಿಶೀಲಿಸುವುದು;

6. ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದ ಮಾರ್ಗಸೂಚಿಗಳನ್ವಯ ಪ್ರತಿಯೊಂದು ಮೆಡಿಕಲ್ ಕಾಲೇಜಿಗೆ ಹೊಂದಿಕೊಂಡಂತೆ ಎಷ್ಟು ನರ್ಸಿಂಗ್ ಕಾಲೇಜುಗಳನ್ನು ತೆರೆಯಲು ಅವಕಾಶವಿರುತ್ತದೆ; ನಿಯಮಗಳಿಗೆ ವಿರುದ್ದವಾಗಿ ಕಾಲೇಜುಗಳನ್ನು ತೆರೆದಿರುವ ಕುರಿತು ಪರಿಶೀಲಿಸುವುದು;

7. 2020-21ನೇ ಸಾಲಿನಲ್ಲಿ ಹೊಸದಾಗಿ ತೆರೆಯಲು ಅನುಮತಿಸಲಾಗಿರುವ ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸ್ ಕಾಲೇಜುಗಳಲ್ಲಿ ಮೂಲಸೌಕರ್ಯಗಳು ಹಾಗೂ ಅಗತ್ಯ ಬೋಧನ ವಿಭಾಗ/ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು ಒಳಗೊಂಡಿದೆಯೇ ಎಂಬುದರ ಕುರಿತು ಪರಿಶೀಲಿಸುವುದು ಹಾಗೂ ರಾಜ್ಯದಲ್ಲಿರುವ ಎಲ್ಲಾ ನರ್ಸಿಂಗ್ ಕಾಲೇಜುಗಳ ಗುಣಮಟ್ಟ ಹೆಚ್ಚಿಸುವ ಕುರಿತು ಪರಿಶೀಲಿಸುವುದು;

-4

8. ನರ್ಸಿಂಗ್ ಹಾಗೂ ಅಲೈಡ್ ಹೆಲ್ತ್ ಸೈನ್ಸ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿ ಹಾಗೂ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಅನುಸರಿಸುತ್ತಿರುವ ನಿಯಮಗಳನ್ನು ಪರಿಶೀಲಿಸುವುದು;

9. ಟಾಸ್ಕ್ ಫೋರ್ಸ್ ಸಮಿತಿಯನ್ನು ರಚಿಸಿರುವ ಉದ್ದೇಶವೇನು, ಸದರಿ ಸಮಿತಿಯಲ್ಲಿರುವ ಸದಸ್ಯರಾರು ಹಾಗೂ ಸಮಿತಿಯ ಕಾರ್ಯವೈಖರಿಗಳೇನು; ಇದುವರೆವಿಗೂ ಟಾಸ್ಕ್ ಫೋರ್ಸ್ ಸಮಿತಿಯು ಕೈಗೊಂಡಿರುವ ಕ್ರಮಗಳ ಕುರಿತು ಪರಿಶೀಲಿಸುವುದು;

10. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಹೈ-ಪವರ್ ಕಮಿಟಿಯು 2020-21ನೇ ಸಾಲಿನಲ್ಲಿ ಕಾಲೇಜುಗಳನ್ನು ತೆರೆಯಲು/ಪ್ರಾರಂಭಿಸಲು ನೀಡಿರುವ ಶಿಫಾರಸ್ಸುಗಳನ್ನು ಪರಿಶೀಲಿಸುವುದು;

11. ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸ್ ಕಾಲೇಜುಗಳನ್ನು ಹೊಸದಾಗಿ ಪ್ರಾರಂಭಿಸುವುದಕ್ಕೆ ಸಲ್ಲಿಸಲಾಗುವ ಅರ್ಜಿಗಳನ್ನು ಸಿಂಡಿಕೇಟ್ ಸಮಿತಿಯಲ್ಲಿ ಪರಿಶೀಲಿಸಿದ ನಂತರ ಸರ್ಕಾರದ ಇತರೆ ಸಮಿತಿಗಳನ್ನು ರಚಿಸಿ ಮರುಪರಿಶೀಲಿಸುವ ಅಗತ್ಯತೆಯ ಕುರಿತು ಪರಾಮರ್ಶಿಸುವುದು; ತಜ್ಞರುಗಳ ಸಮಿತಿಯು ನೀಡಿರುವ ಶಿಫಾರಸ್ಸುಗಳನ್ನು ಪರಿಶೀಲಿಸುವುದು;

12. ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸ್ ಕಾಲೇಜುಗಳನ್ನು ಹೊಸದಾಗಿ ಪ್ರಾರಂಭಿಸುವುದಕ್ಕೆ ಸಲ್ಲಿಸಲಾಗುವ ಅರ್ಜಿಗಳು ಹಾಗೂ ಅನುಮತಿ ನೀಡಲು ಇರುವ ಆಡಳಿತಾತ್ಮಕ ಲೋಪದೋಷಗಳನ್ನು ಸರಿಪಡಿಸಲು ಸೂಕ್ತ ಮಾರ್ಗದರ್ಶಿಗಳನ್ನು ಅಳವಡಿಸುವುದು:

13. ರಾಜ್ಯದಲ್ಲಿ ಈವರೆವಿಗೆ ಪ್ರಾರಂಭಿಸಲಾಗಿರುವ ನರ್ಸಿಂಗ್ ಹಾಗೂ ಅಲೈಡ್ ಹೆಲ್ತ್ ಸೈನ್ಸ್ ಕಾಲೇಜುಗಳಿಗೆ ನೀಡಿರುವ ಅನುಮತಿಯಲ್ಲಿನ ಆಡಳಿತಾತ್ಮಕ ಲೋಪದೋಷಗಳು ಹಾಗೂ ರಾಜ್ಯದಲ್ಲಿರುವ ಎಲ್ಲಾ ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸ್ ಕಾಲೇಜುಗಳಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ಸಮಗ್ರವಾಗಿ ಪರಿಶೀಲಿಸುವುದು ಮತ್ತು ಸರಿಪಡಿಸಲು ಸೂಕ್ತ ನಿರ್ದೇಶನಗಳನ್ನು ಸೂಚಿಸುವುದು:

-5

14. ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸ್ ಕಾಲೇಜುಗಳಲ್ಲಿನ ಪರೀಕ್ಷಾ ಪದ್ಧತಿಯಲ್ಲಿನ ಲೋಪದೋಷಗಳನ್ನು ಗುರುತಿಸುವುದು ಮತ್ತು ಸೂಕ್ತ ಸೂಚನೆಗಳನ್ನು ನೀಡುವುದು:

15. ಸಮಿತಿಯು ಪರಿಶೀಲಿಸಬಯಸುವ ಇತರೆ ಅಂಶಗಳು;

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

**ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಿಗೆ**

**www.kla.kar.nic.in/council/council.htm**